ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು

ಸಿ.ಸಿ. ಸಂಖ್ಯೆ– 18791/2023

ಫಿರ್ಯಾದುದಾರರು – ರಾಜ್ಯದ ಪರ ಬನಶಂಕರಿ ಪೊಲೀಸ್ ಠಾಣೆ,
ಬೆಂಗಳೂರು

–ವಿರುದ್ಧ–

ಆರೋಪಿ – 2. ಭಾಗ್ಯಮ್ಮ.ಎಂ. ಕೋಂ ದಿವಂಗತ ಪ್ರಕಾಶ್.ಹೆಚ್.ಸಿ.,
48 ವರ್ಷ, ವಿಳಾಸ – ನಂ.2518, 17 ನೇ ಮೈನ್,
27 ನೇ ಕ್ರಾಸ್, ಬನಶಂಕರಿ 2 ನೇ ಹಂತ, ಬೆಂಗಳೂರು
ನಗರ, ಕರ್ನಾಟಕ – 560070.

## ದೋಷಾರೋಪಣೆ

ಪಾಟೀಲ ವೀರನಗೌಡ ಎಸ್., ಬಿ.ಕಾಂ. ಎಲ್.ಎಲ್. ಎಂ., ಬೆಂಗಳೂರು ನಗರದ ಮುಖ್ಯ ಮಹಾನಗರ ದಂಡಾಧಿಕಾರಿ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಗಳಿಗೆ ಗುರಿಪಡಿಸುತ್ತೇನೆ.

ದಿನಾಂಕ 17–12–2022 ರಂದು ಬೆಳಿಗ್ಗೆ ಸುಮಾರು 6.00 ಗಂಟೆಯಲ್ಲಿ ಚಾಸಾ 1 ನಿವೇದಿತಾರವರು ತಮ್ಮ ಮನೆಯಾದ ಬೆಂಗಳೂರು ನಗರ, ಬನಶಂಕರಿ 2 ನೇ ಹಂತ, 17 ನೇ ಮೈನ್, 27 ನೇ ಕ್ರಾಸ್, ಮನೆ ನಂ.2518 ರ ನೆಲ ಮಹಡಿಯಲ್ಲಿ ವಾಸವಿದ್ದ 2 ನೇ ಆರೋಪಿಯಾದ ನಿಮ್ಮ ಬಳಿ ಬಂದು ಬಿಲ್ಡಿಂಗ್ ನ ಸೆಲ್ಲರ್ ಗೆ ನೀರು ಬರುತ್ತಿಲ್ಲ, ನೀರಿನ ಸಂಪರ್ಕ ಏಕೆ ಕಟ್ ಮಾಡಿದ್ದೀಯಾ ಎಂದು ಪ್ರಶ್ನಿಸಿದ ವಿಚಾರಕ್ಕೆ ನೀವು ಚಾಸಾ 1 ರವರನ್ನು

ಕುರಿತು ಏನೇ ಸೂಳೆ ಮುಂಡೆ, ಸೂಳೆತನ ಮಾಡಿಕೊಂಡು ಜೀವನ ಮಾಡಿಕೊಂಡಿದ್ದೀಯಾ , ನಿಮ್ಮ ಅಪ್ಪನ ಆಸ್ತಿನ ಇದು ಎಂದು ಇತ್ಯಾದಿಯಾಗಿ ಅವಾಚ್ಯ ಶಬ್ಧಗಳಿಂದ ಬೈದು ಅವಮಾನಿಸಿ ಸಾರ್ವಜನಿಕ ಶಾಂತಿಯನ್ನು ಭಂಗಗೊಳಿಸಲು ಪ್ರಚೋದಿಸಿದ್ದು ಆ ಮೂಲಕ ಭಾ.ದಂ.ಸಂ. ಕಲಂ 504 ರಡಿ ದಂಡನೀಯವಾದ ಅಪರಾಧ ಎಸಗಿದ್ದು ಈ ನ್ಯಾಯಾಲಯದ ಸಂಜ್ಞೆಯಲ್ಲಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನೀವು 2 ನೇ ಆರೋಪಿ ಚಾಸಾ 1 ರವರನ್ನು ಮುಂದೆ ಹೋಗದಂತೆ ಅಕ್ರಮವಾಗಿ ಅಡ್ಡಗಟ್ಟಿ ತಡೆದಿದ್ದು ಆ ಮೂಲಕ ಭಾ.ದಂ.ಸಂ. ಕಲಂ 341ರಡಿ ದಂಡನೀಯವಾದ ಅಪರಾಧ ಎಸಗಿದ್ದು ಈ ನ್ಯಾಯಾಲಯದ ಸಂಜ್ಞೆಯಲ್ಲಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನೀವು 2 ನೇ ಆರೋಪಿ ಸ್ವಯಿಚ್ಛೆಯಿಂದ ಕೈಗಳಿಂದ ಚಾಸಾ 1 ರವರ ಮುಖದ ಮೇಲೆ ಹೊಡೆದು ಉಗುರಿನಿಂದ ಪರಚಿ ಅವರನ್ನು ನೆಲದ ಮೇಲೆ ತಳ್ಳಿ ಹಲ್ಲೆ ಮಾಡಿ ಗಾಯವನ್ನುಂಟು ಮಾಡಿದ್ದು ಆ ಮೂಲಕ ಭಾ.ದಂ.ಸಂ. ಕಲಂ 323ರಡಿ ದಂಡನೀಯವಾದ ಅಪರಾಧ ಎಸಗಿದ್ದು ಈ ನ್ಯಾಯಾಲಯದ ಸಂಜ್ಞೆಯಲ್ಲಿರುತ್ತದೆ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ನೀವು 2 ನೇ ಆರೋಪಿ ಚಾಸಾ 1 ರವರನ್ನು ಕುರಿತು ಇನ್ನೊಮ್ಮೆ ನಮ್ಮ ಮನೆಯ ಹತ್ತಿರ ಬಂದರೆ ನಿನಗೊಂದು ಗತಿ ಕಾಣಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿ ಅಪರಾಧಿಕ

ಭಯೋತ್ಪಾದನೆಯನ್ನುಂಟು ಮಾಡಿದ್ದು ಆ ಮೂಲಕ ಭಾ.ದಂ.ಸಂ. ಕಲಂ 506 ರಡಿ ದಂಡನೀಯವಾದ ಅಪರಾಧ ಎಸಗಿದ್ದು ಈ ನ್ಯಾಯಾಲಯದ ಸಂಜ್ಞೆಯಲ್ಲಿರುತ್ತದೆ.

ಆದ್ದರಿಂದ 2 ನೇ ಆರೋಪಿಯಾದ ನೀವು ಮೇಲ್ಕಂಡ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಪಾಟೀಲ ವೀರನಗೌಡ ಎಸ್.)
ಮುಖ್ಯ ಮಹಾನಗರ ದಂಡಧಿಕಾರಿ,
ಬೆಂಗಳೂರು ನಗರ.

ದಿಃ 27-12-2023

ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು

ಸಿ.ಸಿ. ಸಂಖ್ಯೆ- 18791/2023

ಫಿರ್ಯಾದುದಾರರು - ರಾಜ್ಯದ ಪರ ಬನಶಂಕರಿ ಪೊಲೀಸ್ ಠಾಣೆ,
ಬೆಂಗಳೂರು

-ವಿರುದ್ಧ-

ಆರೋಪಿ - 2. ಭಾಗ್ಯಮ್ಮ.ಎಂ. ಕೋಂ ದಿವಂಗತ ಪ್ರಕಾಶ್.ಹೆಚ್.ಸಿ.

**ಆರೋಪಣೆ**

1. ನಿಮಗೆ ಓದಿ ಹೇಳಿ ವಿವರಿಸಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡಿರಾ?

ಉತ್ತರಃ

2. ಅಪರಾಧವನ್ನು ಒಪ್ಪಿಕೊಳ್ಳುವಿರಾ ಅಥವಾ ಆರೋಪ ವಿಚಾರಣೆಯಾಗಬೇಕ?

ಉತ್ತರಃ

ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸಿದೆ.

ದಿನಾಂಕ 27-12-2023

ಮುಖ್ಯ ಮಹಾನಗರ ದಂಡಾಧಿಕಾರಿ,
ಬೆಂಗಳೂರು ನಗರ